2. ಪ್ರಮುಖ ಪ್ರವಾಸಿ ಸ್ಥಳಗಳ ವೀಕ್ಷಣೆ.
3. ಸಾಂಸ್ಕೃತಿಕ ಕಾರ್ಯಕ್ರಮಗಳು.

ಇ. ಭಾರತ ಸರ್ಕಾರವು ಅನುಮೋದಿಸಿದ ನಂತರ.

ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧ.

552 (1334 – ಎ): ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸರ್ಕಾರವು ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನವನ್ನು ನಿಷೇಧಿಸಿರುವುದೇ ?

ಆ. ಹಾಗಿದ್ದಲ್ಲಿ ವಿಧಾನಸೌಧ ಹಾಗೂ ಮತ್ತಿತರ ಸರ್ಕಾರಿ ಕಛೇರಿಗಳಲ್ಲಿ ಧೂಮಪಾನ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ ?

ಇ. ಇದುವರೆಗೆ ದಾಖಲೆ ಮಾಡಿರುವ ಪ್ರಕರಣಗಳ ಸಂಖ್ಯೆ ಎಷ್ಟು ?

ಈ. ಎಲ್ಲ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧಿಸಲು ಏನು ಕ್ರಮ ಜರುಗಿಸಲಾಗುವುದು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):–

ಅ. ರಾಜ್ಯಾದ್ಯಂತ ಸರ್ಕಾರಿ ಕಛೇರಿಗಳಲ್ಲಿ ಹಾಗೂ ಸರ್ಕಾರದ ನಿಯಂತ್ರಣದಲ್ಲಿ ಇರುವ ಸಾರ್ವಜನಿಕ ಸಂಸ್ಥೆಗಳ ಆವರಣದಲ್ಲಿ ಒಳಗೆ ಧೂಮಪಾನ ಮತ್ತು ಉಗುಳುವುದನ್ನು ನಿಷೇಧಿಸಿ ಕರ್ನಾಟಕ ಪೋಲೀಸ್ ಕಾಯಿದೆ 1963ರ ಸೆಕ್ಷನ್ 92ರ ಉಪ ಸೆಕ್ಷನ್ (1)ರ ಕ್ಲಾಜ್ (ವೈ)ನ ಕೲಂಗಳನ್ನು ವಿಸ್ತರಿಸಿ ದಿನಾಂಕ 8.1.93ರಂದು ಆದೇಶ ಹೊರಡಿಸಿದೆ.

ಆ. ಇಲ್ಲ.

ಇ. ಈ ಬಗ್ಗೆ ಇತ್ತೀಚೆಗಷ್ಟೇ ಆದೇಶಗಳನ್ನು ಹೊರಡಿಸಿರುವುದರಿಂದ ಉಲ್ಲಂಘನೆಯ ವಿರುದ್ಧ ಇನ್ನು ಮುಂದೆ ಪ್ರಕರಣಗಳನ್ನು ದಾಖಲಿಸಲು ಕ್ರಮ ಜರುಗಿಸಲಾಗುವುದು.

ಈ. ಇದನ್ನು ಪರಿಶೀಲಿಸಲಾಗುವುದು.

ಕನ್ನಡ ಆಡಳಿತ ಭಾಷೆಯನ್ನಾಗಿ ಮಾಡಲು ಸರ್ಕಾರದವರು ಕೈಕೊಂಡ ಕ್ರಮಗಳು.

554 (992): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಹೊಸ ಸರ್ಕಾರದವರು ಬಂದ ನಂತರ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಲು ಯಾವ ಯಾವ ಕ್ರಮವನ್ನು ಕೈಗೊಂಡಿರುವರು ?

ಆ. ರಾಜ್ಯದಲ್ಲಿ ಇನ್ನೂವರೆಗೂ ಪ್ರತಿಯೊಂದೂ ಇಲಾಖೆಗಳಲ್ಲಿ ಇಂಗ್ಲೀಷ್‌ನಲ್ಲಿಯೇ ಪತ್ರವ್ಯವಹಾರ ನಡೆಯುತ್ತಿದೆ ಎಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ. ಸರ್ಕಾರದವರು ಅಂಥ ಇಲಾಖೆಗಳವರ ಮೇಲೆ ಯಾವ ಕ್ರಮ ಕೈಗೊಂಡಿರುವರು ಹಾಗೂ ಇಂಗ್ಲೀಷ್‌ನಲ್ಲಿಯೇ ಪತ್ರವ್ಯವಹಾರ ಮಾಡುತ್ತಿರುವ ಇಲಾಖೆಗಳು ಯಾವುವು ?

ಈ. ಇಂಗ್ಲೀಷಿನಲ್ಲಿಯೇ ಪತ್ರವ್ಯವಹಾರ ಮಾಡುತ್ತಿರುವ ಇಲಾಖೆಗಳ ಮೇಲೆ ಅಥವಾ ಯಾವುದರೂ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ. (1) ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಶಾಸನಬದ್ಧ ಅಧಿಕಾರ ಕೊಡಲು ಹಾಗೂ (2) ಒಂದು ವರ್ಷದ ಅವಧಿಯೊಳಗೆ ರಾಜ್ಯ ಮಟ್ಟದಲ್ಲಿಯೂ ಕನ್ನಡವನ್ನು ಆಡಳಿತ ಭಾಷೆಯಾಗಿ ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ. ಪ್ರತಿಯೊಂದೂ ಇಲಾಖೆಗಳಲ್ಲಿ ಇಂಗ್ಲೀಷ್‌ನಲ್ಲಿಯೇ ಎಲ್ಲ ಪತ್ರ ವ್ಯವಹಾರಗಳು ನಡೆಯುತ್ತಿಲ್ಲ. ಕೆಲವು ಇಲಾಖೆಗಳು ಪೂರ್ಣ ಪ್ರಮಾಣದಲ್ಲಿ ಆಡಳಿತದಲ್ಲಿ ಕನ್ನಡವನ್ನು ಬಳಸುತ್ತಿಲ್ಲವೆಂಬುದು ಗಮನಕ್ಕೆ ಬಂದಿದೆ.

ಇ. ಪೂರ್ಣ ಪ್ರಮಾಣದಲ್ಲಿ ಕನ್ನಡವನ್ನು ಬಳಸದೇ ಇರುವ ಇಲಾಖೆಗಳಿಗೆ ಕನ್ನಡವನ್ನೇ ಬಳಸುವಂತೆ ಸೂಚನೆಗಳನ್ನು ನೀಡಲಾಗುತ್ತಿದೆ.

ಈ. ಇಲ್ಲ.

ಭೂಸೇನಾ ನಿಗಮಕ್ಕೆ ಆರ್ಥಿಕ ಮುಗ್ಗಟ್ಟು

555(993): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಭೂ ಸೇನಾ ನಿಗಮವು ಆರ್ಥಿಕ ಮುಗ್ಗಟ್ಟಿನಿಂದ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ಆ ನಿಗಮಕ್ಕೆ ಆರ್ಥಿಕ ಸಹಾಯವನ್ನು ಮಾಡಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವುರು;

ಇ. ಭೂ ಸೇನಾ ನಿಗಮದವರು ಗುಣಮಟ್ಟದ ಕೆಲಸವನ್ನು ಮಾಡುತ್ತಿರುವುದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಹಾಗಿದ್ದಲ್ಲಿ, ಆ ನಿಗಮದಲ್ಲಿ ಉತ್ತಮ ದರ್ಜೆಯ ಕೆಲಸ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ;

ಉ. ಭೂ ಸೇನಾ ನಿಗಮದವರು ಉತ್ತಮ ದರ್ಜೆಯ ಕೆಲಸ ಮಾಡುತ್ತಿಲ್ಲವೆಂದು ತಿಳಿದು ಆಶ್ರಯ ಯೋಜನೆ ಮನೆಗಳನ್ನು ಕಟ್ಟಲು ಕ್ಯಾಬೀನೇಟ್ ಮೀಟಿಂಗ್‌ನಲ್ಲಿ, ಜಿಲ್ಲಾ ಪರಿಷತ್‌ಗಳಲ್ಲಿ ವಿರೋಧಿಸಿರುವರು ಎಂಬುವುದು ನಿಜವೇ ?

ಊ. ಹಾಗೂ ಆದಕ್ಕಾಗಿ ಹಿಂದಿನ ಸರ್ಕಾರದವರು ಭೂ ಸೇನಾ ನಿಗಮದವರಿಗೆ ಆಶ್ರಯ ಮನೆಗಳನ್ನು ಕಟ್ಟಲು ನಿರಾಕರಿಸಲಾಯಿತು ಎಂಬ ಸಂಗತಿ ನಿಜವೇ:

ಋ. ಭೂ ಸೇನಾ ನಿಗಮದವರು ಉತ್ತರ ಕರ್ನಾಟಕದಲ್ಲಿ ಬಹಳಷ್ಟು ಕೆಲಸಗಳನ್ನು ಅರ್ಧಕ್ಕೆ ಮಾಡಿ ನಿಲ್ಲಿಸಿರುವುದು ನಿಜವೇ ? ಹಾಗೂ ನಿಲ್ಲಿಸಿದ ಕೆಲಸಗಳು ಯಾವುವು ಮತ್ತು ಆವುಗಳನ್ನು ಪೂರ್ಣಗೊಳಿಸಲು ಸರ್ಕಾರದವರು ಯಾವ ಕ್ರಮ ಕೈಗೊಳ್ಳವರು ?